ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
KARNATAK UNIVERSITY DHARWAD
ಪರೀಕ್ಷಾ ವಿಭಾಗ
ಗೌಪ್ಯ ಶಾಖೆ, 2ನೇ ಮಹಡಿ, ಪರೀಕ್ಷಾ ಭವನ
EXAMINATION SECTION
Confidential Branch, 2nd Floor, Examination Bhavan
Website: www.kud.ac.in
e-mail: confidential@kud.ac.in
☎: (0836) 2215259

ನಂ.ಕವಿವಿ/ಪರೀಕ್ಷಾ-ಗೌಪ್ಯ/2024/96 ದಿನಾಂಕ : 27/7/24

ಸುತ್ತೋಲೆ

ವಿಷಯ :ರಾಷ್ಟ್ರೀಯ ಶಿಕ್ಷಣ ನೀತಿ 2020 ರಅಡಿಯಲ್ಲಿ ಬರುವ ಬಿ.ಎ. 6 ನೇ ಸೆಮೆಸ್ಟರ್ ಪದವಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ SEC ವಿಷಯಗಳ ಆಂತರಿಕ ಅಂಕಗಳನ್ನು ನಮೂದಿಸುವ ಮಾರ್ಗಸೂಚಿ ಕುರಿತು.

** **

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಶ್ವವಿದ್ಯಾಲಯದ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, NEP-2020 ರ ಅಡಿಯಲ್ಲಿ ಪ್ರವೇಶ ಪಡೆದುಕೊಂಡು 2023–24ನೇ ಸಾಲಿನ 6ನೇ ಸೆಮೆಸ್ಟರ್‌ನಲ್ಲಿ ಬಿ.ಎ. ಭಾಷಾ ವಿಷಯಗಳನ್ನು DSC ಎಂದು ಆಯ್ಕೆ ಮಾಡಿಕೊಂಡು ಅದರಲ್ಲಿ SEC ಯನ್ನು ಆಯ್ಕೆ ಮಾಡಿಕೊಂಡಲ್ಲಿ ಪಠ್ಯಕ್ರಮದಂತೆ 30 ಅಂಕಗಳಿಗೆ ವಿಶ್ವವಿದ್ಯಾಲಯದಿಂದ ವೇಳಾಪಟ್ಟಿ ಪ್ರಕಾರ ಪರೀಕ್ಷೆ ಜರುಗಿಸುವ ಬಗ್ಗೆ ಹಾಗೂ ಆಂತರಿಕ ಪರೀಕ್ಷೆಗೆ 20 ಅಂಕಗಳನ್ನು ನಿಗದಿ ಮಾಡಿರುವುದು ತಮ್ಮ ಗಮನದಲ್ಲಿದೆ. ಆದರೆ, ಭಾಷಾ ವಿಷಯಗಳ SEC ಯನ್ನು ಪೂರ್ಣ ಪ್ರಮಾಣದಲ್ಲಿ ಆಂತರಿಕ ವಿಷಯವೆಂದು ಪರಿಗಣಿಸಿ UUCMS ತಂತ್ರಾಂಶದಲ್ಲಿ 50 ಅಂಕಗಳಿಗೆ ನಿಗದಿಪಡಿಸಲಾಗಿದೆ.

ಆದ್ದರಿಂದ, ವಿಶ್ವವಿದ್ಯಾಲಯದಿಂದ ಸದರ ಭಾಷಾ ವಿಷಯಗಳ SEC ವಿಷಯಗಳಿಗೆ ಪರೀಕ್ಷೆ ಜರುಗಿಸಿ 30 ಅಂಕಗಳಿಗೆ ಮೌಲ್ಯಮಾಪನ ಮಾಡಿದ ನಂತರ ಮಹಾವಿದ್ಯಾಲಯಗಳಿಗೆ 30 ಅಂಕಗಳ ಮಾಹಿತಿಯನ್ನು ನೀಡಲಾಗುವುದು. ಸದರಿ 30 ಅಂಕಗಳಿಗೆ ಪಡೆದುಕೊಂಡ ಅಂಕಗಳು ಹಾಗೂ ಮಹಾವಿದ್ಯಾಲಯಗಳಲ್ಲಿ ಈಗಾಗಲೇ 20 ಅಂಕಗಳಿಗೆ ಆಂತರಿಕ ಪರೀಕ್ಷೆ ಜರುಗಿಸಿದ ಅಂಕಗಳನ್ನು ಒಟ್ಟುಗೂಡಿಸಿ 50 ಅಂಕಗಳಿಗೆ ಪಡೆದುಕೊಂಡ ಅಂಕಗಳನ್ನು ಆಂತರಿಕ ಅಂಕಗಳೆಂದು UUCMS ತಂತ್ರಾಂಶದಲ್ಲಿ ನಮೂದಿಸುವುದು.

ಕಾರಣ, ಸದರ ಭಾಷಾ ವಿಷಯಗಳ SEC ಯ ಆಂತರಿಕ ಅಂಕಗಳನ್ನು UUCMS ತಂತ್ರಾಂಶದಲ್ಲಿ ನಮೂದಿಸುವುದನ್ನು ಈ ಕೂಡಲೇ ಸ್ಥಗಿತಗೊಳಿಸುವುದು ಹಾಗೂ ಈ ಮೇಲಿನಂತೆ ವಿಶ್ವವಿದ್ಯಾಲಯದಿಂದ ಪರೀಕ್ಷೆ ಜರುಗಿಸಿ 30 ಅಂಕಗಳಿಗೆ ಪಡೆದ ಅಂಕಗಳನ್ನು ಮಹಾವಿದ್ಯಾಲಯಗಳಿಗೆ ಒದಗಿಸಿದ ನಂತರ ಮಾತ್ರ ಒಟ್ಟು 50 ಅಂಕಗಳಿಗೆ ಆಂತರಿಕ ಅಂಕಗಳನ್ನು UUCMS ತಂತ್ರಾಂಶದಲ್ಲಿ ನಮೂದಿಸುವುದು.

ಮುಂದುವರೆದು, ಸದರ ಭಾಷಾ ವಿಷಯಗಳ SEC ಯನ್ನು ಆಂತರಿಕ ವಿಷಯವೆಂದು ಪರಿಗಣಿಸಿದ್ದರಿಂದ ವಿಶ್ವವಿದ್ಯಾಲಯದ ಪ್ರವೇಶ ಪತ್ರದಲ್ಲಿ ಸದರಿ SEC ವಿಷಯ ನಮೂದಾಗುವುದಿಲ್ಲ. ಆದ್ದರಿಂದ, ವಿಶ್ವವಿದ್ಯಾಲಯವು ಈಗಾಗಲೇ ಹೊರಡಿಸಿದ ವೇಳಾಪಟ್ಟಿಯ ಪ್ರಕಾರ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಹಾಜರಾಗಲು ಅನುಮತಿಸಬೇಕೆಂದು ಈ ಮೂಲಕ ಆದೇಶಿಸಲಾಗಿದೆ.

27/7/24
ಕುಲಸಚಿವರು(ಮೌಲ್ಯಮಾಪನ)

ಗೆ,
ಕ.ವಿ.ವಿ. ವ್ಯಾಪ್ತಿಗೆ ಒಳಪಡುವ ಎಲ್ಲಆಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ.
ಪ್ರತಿ ಮಾಹಿತಿಗಾಗಿ ಹಾಗೂ ಅವಶ್ಯಕಕ್ರಮಕ್ಕಾಗಿ :

1. ನೋಡಲ್‌ಆಫಿಸರ್, NEP ಹಾಗೂ UUCMS ಘಟಕ, ಕ.ವಿ.ವಿ. ಧಾರವಾಡ.
2. ಉಪಕುಲಸಚಿವರು/ಸಹಾಯಕ ಕುಲಸಚಿವರು, ಪರೀಕ್ಷಾ/ವಿದ್ಯಾಮಂಡಳ ವಿಭಾಗ ಕ.ವಿ.ವಿ., ಧಾರವಾಡ.
3. ಸಿಸ್ಟಮ್ ಅನಾಲಿಸ್ಟ್, ಪರೀಕ್ಷಾ ವಿಭಾಗ ಕ.ವಿ.ವಿ.ಧಾರವಾಡ.
4. ಎಲ್ಲ ಅಧೀಕ್ಷಕರುಗಳು ಪರೀಕ್ಷಾ ವಿಭಾಗ, ಕ.ವಿ.ವಿ.ಧಾರವಾಡ.